15 ನೇ ಅಪರ ಲಘು ವ್ಯವಹಾರಗಳ ನ್ಯಾಯಾಲಯ, ಮೆಯೋಹಾಲ್ ವಿಭಾಗ, ಬೆಂಗಳೂರು

**(ಎಸ್.ಸಿ.ಸಿ.ಎಚ್-19)**

ಸಿಸಿ ಸಂಖ್ಯೆಃ59682ಃ 2018

ಡಿಡಬ್ಲೂ-1

ದಿನಾಂಕಃ11.07.2019 ರಂದು ಪ್ರಮಾಣಿಕರಿಸಲಾಯಿತು.

ಹೆಸರುಃ ವೇದಾವತಿ

ಗಂಡನ ಹೆಸರುಃ ಗಿರೀಶ್

ವಯಸ್ಸುಃ 39 ವರ್ಷ

ವೃತ್ತಿಃ ಗೃಹಿಣಿ

ವಾಸಃ ಹಲಸೂರು, ಬೆಂಗಳೂರು.

ಮುಖ್ಯ ವಿಚಾರಣೆಃ ಶ್ರೀ. ಕೆಎಸ್ ವಕೀಲರಿಂದ ಆರೋಪಿ ಪರವಾಗಿ.

ಪಿರ್ಯಾದಿಯು ನನಗೆ ನಾಲ್ಕೈದು ವರ್ಷಗಳಿಂದ ಪರಿಚಯ ಇರುತ್ತಾರೆ. ಅವರು ನನಗೆ ಸರಿತಾ ಎನ್ನುವವರು ಮುಖಾಂತರ ಪರಿಚಯ ಆಗಿರುತ್ತಾರೆ. ನಾನು ಸರಿತಾ ಎನ್ನುವವರು ಮುಖಾಂತರ ಪಿರ್ಯಾದಿದಾರರ ಪರಿಚಯ ಆಗಿ ಅವರಿಂದ ಮೂರು ಬಾರಿ ಒಟ್ಟು ರೂ.1,60,000-00 ಗಳನ್ನು ಸಾಲವಾಗಿ ಪಡೆದುಕೊಂಡಿದ್ದೆನು. ಅದನ್ನು ತಿಂಗಳಿಗೆ ಶೇ.8 ರಂತೆ ಬಡ್ಡಿಯ ಮೇಲೆ ಪಡೆದುಕೊಂಡಿದ್ದು ಬಡ್ಡಿಯ ಹಣವನ್ನು ಪ್ರತಿ ತಿಂಗಳು ಮನೆಯ ಹತ್ತಿರ ಬಂದು ಪಡೆದುಕೊಂಡು ಹೋಗಿರುತ್ತಾರೆ. ನಾನು ಪಿರ್ಯಾದಿಯಿಂದ ಸಾಲವನ್ನು ಪಡೆದುಕೊಳ್ಳುವಾಗ ಮೂರು ಚೆಕ್ಕುಗಳನ್ನು ಮತ್ತು ಮೂರು ಆನ್ ಡಿಮ್ಯಾಂಡ್ ಪ್ರನೋಟ್‌ಗಳನ್ನು ಸಹಿ ಮಾಡಿಕೊಟ್ಟಿದ್ದೆನು. ನಾನು ಪಡೆದುಕೊಂಡಿದ್ದ ಹಣದಲ್ಲಿ ಪಿರ್ಯಾದಿಯು ನಮ್ಮ ಮನೆಯ ಹತ್ತಿರ ಬಂದು ಸಾಲ ವಾಪಸ್ಸು ಕೊಡುವಂತೆ ಕೇಳಿ ಗಲಾಟೆ ಮಾಡಿದಾಗ ತಲಾ ರೂ.25,000-00 ಗಳಿಗೆ ನಾಲ್ಕು ಚೆಕ್ಕುಗಳ ಮೂಲಕ

ಒಟ್ಟು ಒಂದು ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿರುತ್ತೇನೆ. ಈಗ ನಾನು ಕೇವಲ ರೂ.60,000-00 ಗಳನ್ನು ಕೊಡುವುದು ಬಾಕಿ ಇರುತ್ತದೆ. ಪಿರ್ಯಾದಿಯು ನನ್ನಿಂದ ಪಡೆದುಕೊಂಡಿದ್ದ ನಾಲ್ಕು ಚೆಕ್ಕುಗಳಲ್ಲಿ ಒಂದು ಚೆಕ್ಕನ್ನು ವಾಪಸ್ಸು ಕೊಟ್ಟಿದ್ದು ಮೂರು ಚೆಕ್ಕುಗಳು ಅವರ ಹತ್ತಿರ ಇರುತ್ತದೆ. ಎರಡು ಅನ್‌ಡಿಮ್ಯಾಂಡ್ ಪ್ರನೋಟ್‌ಗಳು ಮತ್ತು ಎರಡು ಚೆಕ್ಕುಗಳು ಪಿರ್ಯಾದಿಯ ಹತ್ತಿರವೇ ಇರುತ್ತದೆ ಅವುಗಳನ್ನು ಕೊಟ್ಟಿರುವುದಿಲ್ಲ. ಪಿರ್ಯಾದಿಯು ಎಸ್‌ಬಿಐ ಬ್ಯಾಂಕ್‌ನ ಒಂದು ಚೆಕ್ಕನ್ನು ರೂ.60,000-00 ರೂಪಾಯಿಗಳಿಗೆ ಹಾಜರುಪಡಿಸಿದ್ದು ಮತ್ತು ಕೆನರಾ ಬ್ಯಾಂಕಿನ ಒಂದು ಚೆಕ್ಕನ್ನು ರೂ.2,20,000-00 ಗಳಿಗೆ ಹಾಜರುಪಡಿಸಿರುತ್ತಾರೆ. ಆ ಚೆಕ್ಕುಗಳು ನಗದೀಕರಣ ಮಾಡದಂತೆ ನಾನು ಸ್ಟಾಂಪ್ ಪೇಮೆಂಟ್ ಮಾಡಿಸಿರುತ್ತೇನೆ. ನಾನು ನಾಲ್ಕು ವರ್ಷಗಳಿಂದ ಪಿರ್ಯಾದಿಗೆ ಬಡ್ಡಿಯನ್ನು ಕೊಟ್ಟಿರುತ್ತೇನೆ. ನಾನು ಹಣವನ್ನು ಬ್ಯಾಂಕ್ ಖಾತೆಯ ಮೂಲಕ ಪಾವತಿ ಮಾಡಿರುತ್ತೇನೆ. ನಾನು ಪಿರ್ಯಾದಿಯೊಂದಿಗೆ ರಾಜಿ ಮಾಡಿಕೊಳ್ಳಲು ಕೇಳಿಕೊಂಡಿದ್ದೆನು ಆದರೆ ಅವರು ರೂ.2,20,000-00 ಗಿಂತ ಆಗುವುದಿಲ್ಲ ಎಂದು ಹೇಳಿರುತ್ತಾರೆ. ನಾನು ಒಂದು ಲಕ್ಷ ರೂಪಾಯಿಗಳನ್ನು ನನ್ನ ಸ್ನೇಹಿತ ಪ್ರೀತಮ್ ಎನ್ನುವವರ ಬ್ಯಾಂಕ್ ಅಕೌಂಟ್ ಮುಖಾಂತರ ಪಾವತಿ ಮಾಡಿರುತ್ತೇನೆ. ಮೂರು ಬ್ಯಾಂಕ್ ಪಾಸ್ ಪುಸ್ತಕಗಳನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ:1 ರಿಂದ 3 ಎಂದು ಗುರುತಿಸಲಾಯಿತು.

ಪಾಟೀಸವಾಲು: ಶ್ರೀ. ಎಆರ್ ವಕೀಲರಿಂದ ಪಿರ್ಯಾದಿದಾರರ ಪರವಾಗಿ.

ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು.
ಬೆಂಗಳೂರು.